ಕರ್ನಾಟಕಸರ್ಕಾರ

(ಕಂದಾಯಇಲಾಖೆ)

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

ದೂರವಾಣಿ ಸಂಖ್ಯೆ:0821-2424079,2422110,2428383

ಫ್ಯಾಕ್ಸ್ನಂ : 2429012 & 2428383 E-Mail : dcofficemysuru@gmail.com

ಸಂಖ್ಯೆ :MYSDC- MAG1 /MLO/71/2020 ದಿನಾಂಕ: 21 /03/2020

ರಾಷ್ಟ್ರೀಯ ವಿಜ್ಞಾನ ಸೂಚಕ ಅಧಿಕಾರಿಗಳು
NIC, ಮೈಸೂರು

COVID-19

ಮಾನ್ಯರೇ

ವಿಷಯ: ಕೋವಿಡ್-19 (ಕರೊನಾ ವೈರಾಣು ಕಾಯಿಲೆ-2019)ಯ ಸ್ಫೋಟ ಮತ್ತು ಹರಡುವುದನ್ನು ತಡೆಗಟ್ಟುವ ಹಾಗೂ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವ ವಿಷಯವನ್ನು ಪ್ರತಿ ದಿನ ಮೈಸೂರು ಜಿಲ್ಲಾ ವೆಬ್ ಸೈಟ್ ನಲ್ಲಿ ಪ್ರಚುರಪಡಿಸುವ ಬಗ್ಗೆ.

ಉಲ್ಲೇಖ:
1. ಕರ್ನಾಟಕ ಸಾಂಕ್ರಾಮಿಕ ರೋಗಗಳು, COVID-19 ರೆಗ್ಯೂಲೇಷನ್ಸ್ -2020ರ ಅಧಿಸೂಚನೆ ಸಂಖ್ಯೆ: ಹೆಚ್.ಎಫ್,ಡಬ್ಲ್ಯೂ,54 ಸಿ ಜಿ ಎಂ 2020 ದಿನಾಂಕ: 11.03.2020.
2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಆದೇಶ ಸಂಖ್ಯೆ DD/SSU/COVID-19/17/19-20 ದಿನಾಂಕ:13-03-2020
3. ಸರ್ಕಾರದ ಕಂದಾಯ ಇಲಾಖೆಯ ಆದೇಶ ಸಂಖ್ಯೆ: ಆರ್.ಡಿ.157 ಟಿ ಎನ್ ಆರ್ 2020, ದಿನಾಂಕ:14.03.2020
4. ಮಾನ್ಯ ಕಂದಾಯ ಸಚಿವರು ಕರ್ನಾಟಕ ಸರ್ಕಾರ ರವರ ಪತ್ರದ ಸಂಖ್ಯೆ: ಕಂ.ಸ 678 / 2020 ದಿನಾಂಕ: 18.03.2020
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರ ಪರಿಷ್ಕೃತ ಆದೇಶ ಸಂಖ್ಯೆ DD/SSU/COVID-19/17/19-20 ದಿನಾಂಕ: 20-03-2020

DISTRICT MAGISTRATE MYSORE DISTRICT

*****

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ COVID-19 ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಹಾಗೂ ವೈಯಕ್ತಿಕ ಮತ್ತು ಸಮುದಾಯದ ತುರ್ತು ಪರಿಸ್ಥಿತಿಯನ್ನು ಎದುರಿಸಲು ಈಗಾಗಲೇ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.

ರಾಜ್ಯದಲ್ಲಿ ಕೊರೊನಾ ರೋಗಾಣು ಹರಡುತ್ತಿರುವ ಬಗ್ಗೆ ಹಿನ್ನೆಲೆಯಲ್ಲಿ ಸರ್ಕಾರವು ಉಲ್ಲೇಖ (2) ರ ಆದೇಶದಲ್ಲಿ Disaster Management Act 2005 ರ ವಿಧಿ 22 ರ ಉಪಪ್ರಕರಣ 2 (H) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಕಾಯ್ದೆಯ ಕಲಂ 24 (a) (b) (f) (h) (j) (k) ಮತ್ತು (l) ರಡಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ

ಅಧ್ಯಕ್ಷರಿಗೆ (ಜಿಲ್ಲಾಧಿಕಾರಿಗಳು) COVID-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಆದೇಶಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಈಗಾಗಲೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಆದಾಗ್ಯೂ ಕೆಲವು ಬಾರಿ ತಪ್ಪು ಹಾಗೂ ಅನಧಿಕೃತ ಮಾಹಿತಿಗಳು ಸಾರ್ವಜನಿಕರಲ್ಲಿ ಹರಡುವುದರ ಮೂಲಕ ಸಾರ್ವಜನಿಕರು, ಗಾಬರಿಗೆ ಒಳಗಾಗುವ ಸಂದರ್ಭ ಉಂಟಾಗಿರುತ್ತದೆ. ಆದುದರಿಂದ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಸೇವೆಗಳು ಹಾಗೂ ಜಿಲ್ಲಾಧಿಕಾರಿಗಳು, ಹೊರಡಿಸುವಂತಹ ಆದೇಶ / ಸುತ್ತೋಲೆ / ಪತ್ರಿಕಾ ಪ್ರಕಟಣೆ / ನಿರ್ದೇಶನ ಇತ್ಯಾದಿಗಳನ್ನು ಆಯಾ ದಿನವೇ ಸ್ವಯಂ ಜಿಲ್ಲಾಧಿಕಾರಿಗಳ ಕಚೇರಿಯಿಂದ ಪಡೆದುಕೊಂಡು ಜಿಲ್ಲಾ ವೆಬ್ ಸೈಟ್ ನಲ್ಲಿ Update ಮಾಡುವಂತೆ ನಿರ್ದೇಶಿಸಿದೆ.

DISTRICT MAGISTRATE
MYSORE DISTRICT

ತಮ್ಮ ನಂಬುಗೆಯ

(ಅಭಿರಾಮ್ ಜಿ.ಶಂಕರ್)
ಜಿಲ್ಲಾಧಿಕಾರಿ
ಹಾಗೂ ಜಿಲ್ಲಾ ದಂಡಾಧಿಕಾರಿ
ಮೈಸೂರು ಜಿಲ್ಲೆ, ಮೈಸೂರು

ಪ್ರತಿಯನ್ನು:-ಕೆಳಕಂಡವರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

1. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು
2. ಪೊಲೀಸ್ ಆಯುಕ್ತರು, ಮೈಸೂರು ನಗರ, ಮೈಸೂರು.
3. ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಮೈಸೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು.
5. ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.
6. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು